# ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಸಿ.ಜೆ.ಎಂ. ನ್ಯಾಯಾಲಯ,

# ಚಾಮರಾಜನಗರ

## <u>ಸಿ.ಸಿಃ 941/2025</u>

ಪ್ರಾಸಾ–14, ಚಾಸಾ–56

| | | |
|---|---|---|
| ಸಾಕ್ಷಿದಾರರ ಹೆಸರು | : | ರಾಜೇಂದ್ರ ಜೆ |
| ತಂದೆಯ ಹೆಸರು | : | ಚೌಡಯ್ಯ |
| ವಯಸ್ಸು | : | 38ವರ್ಷ |
| ಉದ್ಯೋಗ | : | PSI |
| ವಾಸ | : | ನಾಗಮಂಗಲ |

ಸಾಕ್ಷಿಗೆ ದಿನಾಂಕಃ 10.02.2026ರಂದು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.

**<u>ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ</u>**

ನಾನು ದಿಃ 07.01.2022 ರಿಂದ 19.01.2023ರವರೆಗೆ ಚಾಮರಾಜನಗರ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಸಬ್ ಇನ್ಸ್‌ಪೆಕ್ಟರ್ ಕರ್ತವ್ಯ ನಿರ್ವಹಿಸುತ್ತಿದ್ದೇನು.

ದಿನಾಂಕಃ 26.12.2022ರಂದು ಸಮಯ ಮಃ 4 ಗಂಟೆ ಸಮಯದಲ್ಲಿ ಫಿರ್ಯಾದಿ ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರನುನ ಸ್ವೀಕರಿಸಿ ಮೊ.ನಂ. 179/2022 ಕಲಂ 304 ರೆ/ವಿ 34 IPC ರೀತ್ಯಾ ಪ್ರಕರಣ ದಾಖಲೆ ಮಾಡಿ ಪ್ರಥಮ ವರ್ತಮಾನ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿರುತ್ತೇನೆ.

ಅದೇ ದಿನ ಕೇಸಿನ ಕಡತವನ್ನು ಮುಂದಿನ ತನಿಖೆಗಾಗಿ ಪಿ.ಐ– ಚಿಕ್ಕರಾಜಶೆಟ್ಟಿರವರಿಗೆ ಕಡತವನ್ನು ವರ್ಗಾಯಿಸಿರುತ್ತೇನೆ. ಅದೇ ದಿನ ಕೇಸಿನ ಬಿ ಚಿಕ್ಕರಾಜಶೆಟ್ಟಿರವರು ಮೃತ ಸಿದ್ದರಾಜುರವರ ಶವಾ ಪರೀಕ್ಷೆ ಕೈಗೊಳ್ಳಲು ನೀಡಿದ ಜ್ಞಾಪನವನ್ನು ಸ್ವೀಕರಿಸಿ ಸೀಮ್ಸ್ ಆಸ್ಪತ್ರೆ ಚಾಮರಾಜನಗರದಲ್ಲಿ ಮೃತ ಸಿದ್ದರಾಜುರವರ ಶವಾ ಪರೀಕ್ಷೆಯನ್ನು ಕೈಗೊಂಡಿರುತ್ತೇನೆ. ದ

ದಿಃ 27.12.2022ರಂದು ಕೇಸಿನ ತನಿಖಾಧಿಕಾರಿಯವರು ಕೃತ್ಯ ನಡೆದ ಮಹಜರ್ ಜರುಗಿಸಿಸಲು ನೀಡಿದ ಜ್ಞಾಪನವನ್ನು ಸ್ವೀಕರಿಸಿ ಕೇಸಿನ ಪ್ರತ್ಯೇಕ್ಷ ದರ್ಶಿಯಾದ ವೆಂಕಟೇಶ್

ರವರು ತೋರಿಸಿದ ಸ್ಥಳವಾದ ಬೀಸಲವಾಡಿ ಗ್ರಾಮದ ಸರ್ವೇ ನಂ. 172 ರಲ್ಲಿ ರೇಣುಕಾದೇವಿರವರಿಗೆ ಸೇರಿದ ಬಿಳಿ ಕಲ್ಲು ಕ್ವಾರಿಯಲ್ಲಿ ಪಂಚರುಗಳಾದ ಬಸವಣ್ಣ ಹಾಗೂ ಮಹೇಶ್ ರವರ ಸಮಕ್ಷಮ ಮಃ 1 ರಿಂದ 2.30ರವರೆಗೆ ಸ್ಥಳದಲ್ಲಿ ಮಹಜರ್ ಕ್ರಮವನ್ನುಜರುಗಿಸಿ ಸ್ಥಳದಲ್ಲಿ ದೊರೆತ ಬಾಂಗಿಗಳನ್ನು ಪಂಚರ ಸಮಕ್ಷಮ ಅಮಾನತ್ತುಪಡಿಸಿ ಪಿ.ಎಫ್-168/2022ರಲ್ಲಿ ನಮೂದು ಮಾಡಿ ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿಕೊಂಡಿರುತ್ತೇನೆ. ಈ ಕೇಸಿನ ಬಗ್ಗೆ ತನಿಖಾಧಿಕಾರಿಗೆ ವರದಿಯನ್ನು ನೀಡಿರುತ್ತೇನೆ.

ಈಗಾಗಲೇ ನಿಪಿ-1 ಎಂದು ಗುರ್ತಿಸಲಾಗಿರುವ ದೂರಿನಲ್ಲಿರುವ ಸಾಕ್ಷಿದಾರರ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು. ಪ್ರ.ವ.ವರದಿಯನ್ನು ನಿಪಿ.19 ಎಂದು, ಸಾಕ್ಷಿದಾರರ ಸಹಿಯನ್ನು ನಿಪಿ.19(ಎ) ಎಂದು ಗುರುತಿಸಲಾಯಿತು. ಶವಾ ತನಿಖಾ ವರದಿ ( ಸಿದ್ದರಾಜುರವರ) ಯನ್ನು ನಿಪಿ-20 ಎಂದು, ಸಾಕ್ಷಿದಾರರ ಸಹಿಯನ್ನು ನಿಪಿ.20(ಎ) ಎಂದು ಗುರುತಿಸಲಾಯಿತು. ಈಗಾಗಲೇ ನಿಪಿ-9 ಎಂದು ಗುರ್ತಿಸಿರುವ ಸ್ಥಳ ಮಹಜರ್ ನಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-9(ಬಿ) ಎಂದು ಗುರುತಿಸಲಾಯಿತು. ಕೃತ್ಯ ಸ್ಥಳದ ಮೂರು ಛಾಯಾಚಿತ್ರಗಳನ್ನು ಒಟ್ಟಾರೇಯಾಗಿ ನಿಪಿ-21 ಎಂದು ಗುರುತಿಸಲಾಯಿತು.

**ಪಾಟೀಸವಾಲುಃ ಶ್ರೀ ಕೆ.ಬಿ. ವಕೀಲರಿಂದಃ**

ನಿಪಿ-1 ದೂರು ಬರೆದವರು ಮತ್ತು ಕೊಟ್ಟವರ ಎರಡು ಸಹಿ ಇರುತ್ತದೆ. ಸುಳ್ಳು FIR ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ. ಸ್ಥಳ ಮಹಜರ್ ನ್ನು ಠಾಣೆಯಲ್ಲಿ ಸೃಷ್ಟಿ ಮಡಿದ್ದೇನೆ ಎಂದರೆ ಸರಿಯಲ್ಲ. ಪಂಚರ ಸಹಿಗಳನ್ನು ಠಾಣೆಯಲ್ಲಿ ಪಡೆದುಕೊಂಡಿದ್ದೇನೆ ಎಂದರೆ ಸರಿಯಲ್ಲ. ಸ್ಥಳ ಮಹಜರ್ ಸಮಯದಲ್ಲಿ ಫೋಟೋಗಳನ್ನು ತೆಗೆದಿಲ್ಲ ಎಂದರೆ ಸರಿಯಲ್ಲ. ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ</u>** ಇಲ್ಲ.
(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಸಿ.ಜೆ.ಎಂ., ಚಾಮರಾಜನಗರ.